**O. S. No:65/2019**
**DW:5**

(ಇಂದು ದಿನಾಂಕಃ **04-03-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಶ್ರೀ ವಿ ಟಿ ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ನಿಜ ಇರುತ್ತವೆ. ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| **ನಿ.ಡಿ 17** | ಆರ್ ಎಸ್ ಎ ಸಂಃ101485/2022 ನೇದ್ದರ ಪ್ರತಿ. |

**ಪಾಟೀ ಸವಾಲುಃ ಶ್ರೀ ಎಸ್ ಆರ್ ಎಚ್ ವಕೀಲರಿಂದಃ**

ನಾನು ಈ ದಾವೆಯಲ್ಲಿ ಪ್ರತಿವಾದಿ ಇದ್ದು, ನನ್ನ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಹೇಮರಡ್ಡಿಯವರ ಮಕ್ಕಳು ಹೇಮರಡ್ಡಿಯ ಭಾಗದ ಆಸ್ತಿಯನ್ನು ಪಾಲು ಕೇಳುತ್ತಿದ್ದಾರೆ ಎಂದರೆ ಸರಿ. ವಾದಿಯರು ನಮ್ಮ ತಂದೆಯ ಭಾಗದ ಆಸ್ತಿಯಲ್ಲಿ ಪಾಲು ಕೇಳಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಮೂಲ ದಾವಾ ಸಂಃ 158/2011 ರಲ್ಲಿಯಾದ ರಾಜೀಯನ್ನು ನನ್ನ ತಂದೆ ಪ್ರಶ್ನಿಸಿ ಅರ್ಜಿ ಸಲ್ಲಿಸಿರುತ್ತಾರೆ. ಕ್ರಿ. ಮಿ. ಸಂಃ 04/2022 ರಲ್ಲಿ ಯಾವುದೇ ರೀತಿಯ ತಡೆಯಾಜ್ಞೆ ಇರುವುದಿಲ್ಲ. ಹೇಮರಡ್ಡಿಯವರಿಗೆ ಕೃಷಿಯ ಆದಾಯದ ಮೂಲ ಹೊರತುಪಡಿಸಿ ಬೇರೆ ಆದಾಯದ ಮೂಲಗಳಿದ್ದವಾ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆತನದ ವ್ಯವಹಾರವನ್ನು ನಾವು ಮಾಡುತ್ತೇವೆ ಹಾಗೂ ಹೇಮರಡ್ಡಿಯವರ ಮನೆತನದ ವ್ಯವಹಾರವನ್ನು 1 ನೇ ಪ್ರತಿವಾದಿ ಮಾಡುತ್ತಾರೆ ಎಂದರೆ ಸರಿ. ಸದರಿಯವರು ತಮ್ಮ ಮನೆಯ ವ್ಯವಹಾರಗಳನ್ನು ಮಾಡುವಾಗ ನಮ್ಮನ್ನು ಕೇಳಿ ಮಾಡುವುದಿಲ್ಲ. ಹೇಮರಡ್ಡಿಯವರು ರೂ. 6,00,000/- ಹಾಗೂ 2,00,000/- ಗಳನ್ನು ಸಾಲ ಮಾಡುವಾಗ ನನ್ನನ್ನು ಕೇಳಿ ಮಾಡಿರುವುದಿಲ್ಲ. ಆದರೆ ನನಗೆ ಮಾಹಿತಿ ಇರುತ್ತದೆ. ಸದರಿ ಸಾಲ ಮರು ಪಾವತಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮರು ಪಾವತಿಯಾದ ನಂತರ ಪುನಃ ಸಾಲ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿಯವರ ಸಾಲದ ಕುರಿತು ನನಗೆ ಸಂಬಂಧವಿಲ್ಲ ಎಂದರೆ ಸರಿ.

ಸದರಿಯವರು ಸಾಲದ ಹಣವನ್ನು ಏನು ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಹೇಮರಡ್ಡಿಯ ಹೆಣ್ಣು ಮಕ್ಕಳು 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟಿದ್ದರು ಎನ್ನಲಾದ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ. ಸದರಿ ದಾಖಲೆಯನ್ನು ಎಲ್ಲಿ ತಯಾರಿಸಿರುತ್ತಾರೆ ಹಾಗೂ ಯಾರು ನೋಟರಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಎನ್ ಬಿ ಸವದಿ ವಕೀಲರು ನೋಟರಿ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ಹೇಳಿದ ರೀತಿ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂಃ 124 ರಲ್ಲಿ ವಾದಿಯರು ಅರ್ಧ ಹಿಸ್ಸೆಯಲ್ಲಿ ಪಾಲು ಕೇಳಿರುತ್ತಾರೆ. ನನ್ನ ತಂದೆಯ ಹೆಸರು ಪಹಣಿಯಲ್ಲಿ ದಾಖಲಿರುವ ಕಾರಣ ನನ್ನನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದರೆ ಸರಿ. ನನ್ನ ತಂದೆಗೆ ಹಾಗೂ ಹೇಮರಡ್ಡಿಗೆ ವಿಲ್ ಮುಖಾಂತರ ಬಂದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳಿರುವುದಿಲ್ಲ.

2. ಇಟಗಿ ಗ್ರಾಮದ ಆಸ್ತಿ ಹೇಮರಡ್ಡಿಯವರು ಖರೀದಿ ಮಾಡಿದ ಆಸ್ತಿಯಾರುತ್ತದೆ ಎಂದರೆ ಸರಿ. ನಿಡಿ-17 ರ ಬಗ್ಗೆ ನನಗೆ ಅಲ್ಪ ಮಾಹಿತಿ ಇರುತ್ತದೆ. ಶ್ರೀದೇವಿ ಎನ್ನುವವರು ನನ್ನ ಸಹೋದರ ವೆಂಕಟೇಶನ ಹೆಂಡತಿಯಾಗಿರುತ್ತಾರೆ. ಸದರಿಯವರಿಗೆ ಇಟಗಿ ಗ್ರಾಮದ ಆಸ್ತಿಯಲ್ಲಿ ಯಾವುದೇ ಹಕ್ಕು ಇರಲಿಲ್ಲ. ಸದರಿಯವರು ಖೊಟ್ಟಿಯಾಗಿ ತನ್ನ ಹೆಸರನ್ನು ದಾಖಲಿಸಿಕೊಂಡು ಸಣ್ಣವೀರಪ್ಪ ಫಕ್ಕೀರಪ್ಪ ಹೊಳೆಯಪ್ಪನವರ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟವನ್ನು ಹೇಮರಡ್ಡಿ ಜೀವಂತವಿದ್ದಾಗ ಅದನ್ನು ಪ್ರಶ್ನಿಸಿದ್ದರು ಎಂದರೆ ಸರಿ. ಸದರಿ ದಾವೆ ಹೇಮರಡ್ಡಿಯ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ಸಣ್ಣವೀರಪ್ಪ ನವರು ಸಲ್ಲಿಸಿದ್ದ ಆರ್ ಎ ನಂಃ 19/2018 ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಕುರಿತು ದಾವೆ ಚಾಲ್ತಿಯಲ್ಲಿದೆ ಎಂದು ತೋರಿಸಲು ನಿಡಿ-17 ನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಇಟಗಿ ಗ್ರಾಮದ ಆಸ್ತಿಯಲ್ಲಿ ಸಣ್ಣವೀರಪ್ಪನವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

3. ವಿ ಪಿ ಸಿ ಆಸ್ತಿ ಸಂಃ 299 ನ್ನು ಹೇಮರಡ್ಡಿಯವರು ಖರೀದಿಸಿರುತ್ತಾರೆ ಎಂದರೆ ಸರಿ.

ಸದರಿ ಆಸ್ತಿಯನ್ನು 1 ನೇ ಪ್ರತಿವಾದಿ ವಾರಸ ನಾತೆಯಿಂದ ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತ ಸಂಃ 299 ರಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ. ಆಸ್ತಿ ಸಂಃ 31 ಇದ್ದು ನನ್ನ ಹೆಣ್ಣಜ್ಜಿ ಕಡೆಯಿಂದ ಬಂದಿರುತ್ತದೆ. ಮೃತ್ಯು ಪತ್ರದ ಪ್ರಕಾರ ಸದರಿ ಆಸ್ತಿಯಲ್ಲಿ ನಮಗೆ ಅರ್ಧ ಹಿಸ್ಸೆ ಇರುತ್ತದೆ. 1 ನೇ ಪ್ರತಿವಾದಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**